ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ದಿನಾಂಕ 29.06.2026ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ:- ವಾದಿ ಪರ ವಕೀಲರಾದ ಶ್ರೀ ಬಿ.ಸಿ.ಎಸ್ ರವರಿಂದ:-**

ದಿನಾಂಕ 01.12.2025 ರಂದು ಮಾಹಿತಿ ಹಕ್ಕು ಕಾಯ್ದೆ ಅಡಿ ನೀಡಿದ ಅರ್ಜಿಯನ್ನು ಹಾಜರುಪಡಿಸಿದ್ದು, ಸದರಿ ಅರ್ಜಿಯು ನಕಲು ಪ್ರತಿಯಾಗಿದ್ದರಿಂದ ಅದನ್ನು ನಿಶಾನೆಯಾಗಿ ಗುರುತಿಸಿರುವುದಿಲ್ಲ. ದಿನಾಂಕ 24.12.2025 ಮಾಹಿತಿ ಹಕ್ಕು ಅಧಿಕಾರಿ ಮತ್ತು ಭೂದಾಖಲೆಗಳ ಸಹಾಯಕ ನಿರ್ದೇಶಕರು ವಿರಾಜಪೇಟೆ ತಾಲ್ಲೂಕುರವರು ನೀಡಿದ ಹಿಂಬರಹವನ್ನು ನಿ.ಪಿ-12 ಎಂದು, ಟಿಪ್ಪಣಿಯ ದೃಢೀಕೃತ ನಕಲನ್ನು ನಿ.ಪಿ-13 ಎಂದು, ಪಿ.ಟಿ ಶೀಟ್ ನ ದೃಢೀಕೃತ ನಕಲನ್ನು ನಿ.ಪಿ 14 ಎಂದು, ಆಕಾರ್ ಬಂಧ್ ನ ದೃಢೀಕೃತ ನಕಲನ್ನು ನಿ.ಪಿ 15 ಎಂದು, ಋಣಭಾರ ರಾಹಿತ್ಯ ಪ್ರಮಾಣಪತ್ರಗಳ ದೃಢೀಕೃತ ನಕಲುಗಳನ್ನು ನಿ.ಪಿ-16 ಮತ್ತು 17 ಎಂದು, ಜಮಾಬಂಧಿಯ ದೃಢೀಕೃತ ನಕಲನ್ನು ನಿ.ಪಿ 18 ಎಂದು, ಆಕಾರ್ ಬಂಧ್ ನ ದೃಢೀಕೃತ ನಕಲನ್ನು ನಿ.ಪಿ 19 ಎಂದು, ಪಹಣಿ ಪತ್ರಿಕೆಯನ್ನು ನಿ.ಪಿ 20 ಎಂದು, ವಿ.ಬಾಡಗ ಗ್ರಾಮದ ಗ್ರಾಮ ನಕ್ಷೆಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ 21 ಎಂದು ಗುರುತಿಸಲಾಯಿತು.

ಶ್ರೀ ಐ.ಆರ್.ಪಿ ವಕೀಲರು ಹಾಜರಿದ್ದು, ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.